ಮುಂಜಾವು

ವಾರಪತ್ರಿಕೆ

ಸಂಪಾದಕ: ಸಿರಿಮನೆ ನಾಗರಾಜ್

ರಿಜಿಸ್ಟರ್ಡ್ ನಂ. ಆರ್‌ಎನ್‌ಎಸ್ – 19

4ನೇ ವರ್ಷ 42ನೇ ಸಂಚಿಕೆ ಕೊಪ್ಪ 29–6–1986 ಭಾನುವಾರ ಬೆಲೆ 40 ಪೈಸೆ

ಮಾಲೀಕ ವರ್ಗದ ಮನೋಭಾವ—ಭಾರತಕ್ಕೂ ಜಪಾನ್‌ಗೂ ಹೋಲಿಕೆ!

ಭಾರತದ ಮಾಲೀಕರುಗಳು ಜಪಾನಿನ ಕಾರ್ಮಿಕರ ಶಿಸ್ತು, ದಕ್ಷತೆ, ಕರ್ತವ್ಯಪ್ರಜ್ಞೆಗಳನ್ನು ಎತ್ತಿ ಹೇಳುತ್ತಾರೆ. ಆದರೆ ಅದೇ ಜಪಾನಿನಲ್ಲಿ ಒಬ್ಬ ಮಾಲೀಕ, ತನ್ನ ಕಾರ್ಮಿಕರು ಕೇವಲ ಒಂದು ಕಪ್ಪು ತೋಳುಪಟ್ಟಿ ಧರಿಸಿದರೂ ತನ್ನ ಸಂಸ್ಥೆಯ ಮಾನ ಹೋಯಿತು ಎಂದು ಪರಿಗಣಿಸುತ್ತಾನೆ; ಅಂದರೆ ಅಷ್ಟು ಸಹ ಪ್ರತಿಭಟಿಸುವ ಅವಶ್ಯಕತೆಯಿಲ್ಲದಂತೆ ತನ್ನ ಕಾರ್ಮಿಕರನ್ನು ತಾನು ಸ್ವತಃ ನಿರ್ವಹಿಸುವಂತೆ ನೋಡಿಕೊಳ್ಳುತ್ತಾನೆ—ಎಂಬುದನ್ನು ಮಾತ್ರ ಇವರು ಜಾಣತನದಿಂದ ಮರೆಯುತ್ತಾರೆ.

ಶಂಕರ್ ಸಾರಿಗೆ ಸಂಸ್ಥೆಯಲ್ಲಿ ಮುಷ್ಕರದ 'ಉದ್ಘಾಟನೆ'!

ಚೊಚ್ಚಲ ಪ್ರಯತ್ನ ಮಿಂಚಿನ ಮುಷ್ಕರ !!

ಕೊಪ್ಪ: "ಉಣ್ಣೋಕಲ್ಲ, ಉಡೋಕಲ್ಲ...!" ಎಂಬ ಮಾತಿನಂತೆ, ಸಂಬಳಕ್ಕಲ್ಲ, ಭತ್ಯೆಗಲ್ಲ, ಬೋನಸ್‌ಗಲ್ಲ, ಸಮವಸ್ತ್ರಕ್ಕಲ್ಲ. ಕೇವಲ "ಯೂನಿಯನ್ ಮುರಿಯುವ ಮ್ಯಾನೇಜ್‌ಮೆಂಟ್ ತಂತ್ರ"ವನ್ನು ಪ್ರತಿರೋಧಿಸಲು ಶಂಕರ್ ಕಂಪೆನಿಯ ಇನ್ನೂರೈವತ್ತಕ್ಕೂ ಹೆಚ್ಚು ಕಾರ್ಮಿಕರು ತಮ್ಮ ಚೊಚ್ಚಲ ಮುಷ್ಕರವನ್ನು ವಿನಿಯೋಗಿಸಬೇಕಾಯಿತು.

ಕಾರ್ಮಿಕರ ಈ ಮುಷ್ಕರ ಕಾನೂನು ಬಾಹಿರ ಎಂದು ಕಂಪೆನಿಯ ಮಾಲೀಕರಲ್ಲೊಬ್ಬರಾದ ರಮೇಶ್‌ರಾವ್ ಹೇಳಿದರೆ, ತಾವು ಸಂಘಟನೆಯಾಗುವುದನ್ನು ಮುರಿಯಲು ಮ್ಯಾನೇಜ್‌ಮೆಂಟ್ ನಡೆಸಿದ 'ಡರ್ಟಿ ಟ್ರಿಕ್ಸ್' (ಕೊಳಕು ತಂತ್ರ)ಗಳನ್ನು ಎದುರಿಸಲು ತಾವು ನಡೆಸಿದ ಎಲ್ಲಾ ಕಾನೂನುಬದ್ಧ ಮಾರ್ಗಗಳಿಗೂ ಬೆಲೆಯಿಲ್ಲವಾದಾಗ ಈ ಕೊನೇ ಅಸ್ತ್ರದ ಹೊರತು ತಮ್ಮ ಬಳಿ ಇನ್ನೇನೂ ಉಳಿದಿರಲಿಲ್ಲ ಎಂಬುದು ಕಾರ್ಮಿಕರ ಹೇಳಿಕೆ.

ಅಂತೂ ಈ ಸಂಸ್ಥೆಯ ಸುಮಾರು ಮೂವತ್ತು ವರ್ಷಕ್ಕೂ ಹೆಚ್ಚಿನ ಇತಿಹಾಸದಲ್ಲಿ ಜೂನ್ 28ರಂದು ಮಾಲೀಕ–ಕಾರ್ಮಿಕ ಸಂಬಂಧದ ವಿಷಾದಕರ ಅಧ್ಯಾಯವೊಂದು ಆರಂಭವಾಯಿತು.

ಹಿನ್ನೆಲೆ

ಇಷ್ಟು ವರ್ಷಗಳೂ ಈ ಸಂಸ್ಥೆಯಲ್ಲಿ ಕಾರ್ಮಿಕ ಸಂಘಗಳಿರಲಿಲ್ಲ. ಈ ಹಿಂದೆ ಸಂಘ ಸ್ಥಾಪನೆಗೆ ನಡೆದ ಯತ್ನಗಳನ್ನೆಲ್ಲಾ ಬರ್ಬರವಾಗಿ ಹತ್ತಿಕ್ಕಲಾಗಿತ್ತು ಎನ್ನುತ್ತಾರೆ ಅತಿ ಹಿರಿಯ ಕಾರ್ಮಿಕರು. ಅಂತೂ ಈಗ್ಗೆ ಸುಮಾರು 10 ತಿಂಗಳ ಹಿಂದೆ ಕಾರ್ಮಿಕರು ಸಂಘ ಸ್ಥಾಪಿಸುವಲ್ಲಿ ಕಡೆಗೂ ಯಶಸ್ವಿಯಾದರು. ಹೀಗೆ ಬಿ.ಎಂ.ಎಸ್. ಸಂಘಟನೆಯಡಿ "ಚಿಕ್ಕಮಗಳೂರು ಜಿಲ್ಲಾ ಮೋಟಾರ್ ಅಂಡ್ ಜನರಲ್ ಮಜ್ದೂರ್ ಸಂಘ" ಆರಂಭಗೊಂಡಿತು. ಕಂಪೆನಿ ಕಚೇರಿಯ ಕೆಲ ಮಂದಿ ಗುಮಾಸ್ತೆಗಳ ಹೊರತಾಗಿ ಇಡೀ ಗ್ಯಾರೇಜ್ ಮತ್ತು ಲೈನ್ ಸಿಬ್ಬಂದಿ ಇದರಡಿ ಸಂಘಟಿತರಾದರು.

ಆದರೆ ಈ ದೇಶದಲ್ಲಿ ಮಾಮೂಲಾಗಿರುವಂತೆ, ಈ ಸಂಘವನ್ನು ಏನಕೇನ ಬುಡ ತಪ್ಪಿಸಲು ಮಾಲೀಕ ವರ್ಗ ಸಹ ಆತುರಪಡುತ್ತಿತ್ತು ಎಂದು ಕಂಡುಬರುತ್ತದೆ. ಮೊದಲಿಗೇ ಕೆಲ ಮುಖಂಡರ ವರ್ಗಾವಣೆ, ಮಾರ್ಗ ಬದಲಿಕೆ, ಹುದ್ದೆ ಹಿಂಬಡ್ತಿ ಮುಂತಾದವು ನಡೆದವು. ಸಾಲದಾದಾಗ ಕಾರ್ಯದರ್ಶಿ ಅನ್ವರ್ ಖಾನ್ "ವಿದೇಶಕ್ಕೆ ಹೋದ" (ಶಿವಮೊಗ್ಗದಲ್ಲೇ ಇದ್ದಾನೆನ್ನುತ್ತಾರೆ ಕಾರ್ಮಿಕರು!) ಸಂಘದ ಅಧ್ಯಕ್ಷ ಹಾಗೂ ಶಂಕರ್ ವಿಠಲ್ ಸಂಸ್ಥೆಯ ಮಾಜಿ ಉದ್ಯೋಗಿ ಪಿ.ಎಸ್. ಭಟ್ ಇರುವುದು ಮಂಗಳೂರಲ್ಲಿ. ಪ್ರಧಾನ ಕಾರ್ಯದರ್ಶಿ ಬಿ.ಎಂ.ಎಸ್.ನ ಆಯನೂರು ಮಂಜುನಾಥ್ ಇರುವುದು ಶಿವಮೊಗ್ಗದಲ್ಲಿ. ಇಲ್ಲಿ ಉಳಿದಿದ್ದ ಪ್ರಮುಖ ಕಾರ್ಯಕರ್ತರೆಂದರೆ ಉಪಾಧ್ಯಕ್ಷ ಮೋಹನ್ ಕುಮಾರ್ ಮತ್ತು ಖಜಾಂಚಿ ಹೆಚ್.ಆರ್. ಸಂಜೀವ ಇಬ್ಬರೇ. ಮೋಹನ್ ಕುಮಾರ್ ಜೂನ್ 14ರಂದು ಪದವಿಯಿತ್ತರೇ ರಕ್ತ ಶಾಂತಿಯಾಗಿ ತೀರಿಕೊಂಡರು.

ವರ್ಗಾವಣೆ ತಂತ್ರ

ಗುಮಾಸ್ತ ಸಂಜೀವನನ್ನು ಚಿಕ್ಕಮಗಳೂರು 'ಬ್ರಾಂಚ್'ಗೆ ಜೂನ್ 10ರಂದು ವರ್ಗ ಮಾಡಲಾಯಿತು.

ಆದರೆ ಅಲ್ಲಿ ಶಂಕರ್ ಕಂಪೆನಿಯ ಬ್ರಾಂಚ್ ಇಲ್ಲ. ಬಸ್ಸು ಶೆಡ್ ಕೂಡ ಇಲ್ಲ. ಅಲ್ಲಿರುವುದು ಅರವಿಂದ್ ಮೋಟಾರ್ಸ್ ಮತ್ತು ಟಾಟಾ ಸರ್ವಿಸ್ ಗ್ಯಾರೇಜ್ ಎನ್ನಲಾಗಿದೆ.

ಇಷ್ಟಲ್ಲದೆ, ಸಂಘದ ಪದಾಧಿಕಾರಿಗಳನ್ನು ಮುಖ್ಯ ಸ್ಥಳದಿಂದ ವರ್ಗಾಯಿಸಕೂಡದು ಎಂದು ಕಾರ್ಮಿಕ ಕಾಯಿದೆಯಿದೆ ಎನ್ನುತ್ತಾರೆ ವಕೀಲರು. ಆದರೆ, "ನಾನು ಅತ್ಯುನ್ನತ ಮಟ್ಟದ ಕಾನೂನು ಸಲಹೆ ಪಡೆದಿದ್ದೇನೆ. ನಾವು ಯಾವುದೇ ಕಾನೂನನ್ನೂ ಉಲ್ಲಂಘಿಸಿಲ್ಲ" ಎನ್ನುತ್ತಾರೆ ರಮೇಶ್‌ರಾವ್.

ವ್ಯರ್ಥವಾದ ಮನವಿ

ಈ ವರ್ಗಾವಣೆಯನ್ನು ರದ್ದು ಪಡಿಸುವಂತೆ ಸಂಜೀವ ಮರುಪರಿಯಾಗಿ ಮಾಡಿದ ಮನವಿ ವ್ಯರ್ಥವಾಯಿತು. ಯಾವುದೇ ಆರೋಪವಿಲ್ಲ, ವಿಚಾರಣೆಯಿಲ್ಲ, ಕಾರಣ ಕೊಟ್ಟಿಲ್ಲ. ಕೇವಲ ಹಕ್ಕು ಎಂಬ ಕಾರಣಕ್ಕೆ ತೀರ ಅನಧಿಕೃತವಾಗಿ ಮಾಡಿರುವ ಈ ವರ್ಗಾವಣೆಯನ್ನು ಪ್ರತಿಭಟಿಸಲು ಕಾರ್ಮಿಕರು ನಿರ್ಧರಿಸಿದರು. ಚಿಕ್ಕಮಗಳೂರಿನ ಸಹಾಯಕ ಲೇಬರ್ ಕಮಿಶನರ್‌ಗೆ ದೂರು ಒಯ್ದರು. ಆದರೆ "ನೀವು ಬೇಕಾದರೆ 3 ತಿಂಗಳು ಸ್ಟ್ರೈಕ್ ಮಾಡಿ. ಸಂಜೀವನನ್ನು ಮಾತ್ರ ಹಿಂದಕ್ಕೆ ತೆಗೆದುಕೊಳ್ಳುವುದಿಲ್ಲ" ಎಂದು ರಮೇಶ್‌ರಾವ್ 24ರಂದು ಕಾರ್ಮಿಕರೆಲ್ಲರ ಮೀಟಿಂಗ್ ಕರೆದು ಘೋಷಿಸಿದರು. ಮರುದಿನದಿಂದ ಆತನನ್ನು ಗೇಟಿನೊಳಗೆ ಬಿಡದಂತೆ ಕಾವಲಿನವರಿಗೆ ಆಜ್ಞೆಯಾಯಿತು.

ಮುಷ್ಕರದ ಎಚ್ಚರಿಕೆ

ಇಂಥ ಪ್ರತೀಕಾರ ಕ್ರಮ (ವಿಕ್ಟಿಮೈ-ಸೇಶನ್)ವನ್ನು ಮಾಲೀಕರು ಕೈ ಬಿಡದಿದ್ದರೆ ತಾವು 'ಸಾಂಕೇತಿಕ ಮುಷ್ಕರ' ಮಾಡಬೇಕಾಗುತ್ತದೆಂದು ಕಾರ್ಮಿಕರು 25ರಂದು ಪೋಲೀಸ್ ಠಾಣೆಗೆ ತಿಳುವಳಿಕೆ ಕೊಟ್ಟರು. ಆದರೆ ಇಂಥ ಕ್ರಮಗಳು ತೀವ್ರವಾದುದಲ್ಲದೆ ಜೋಸೆಫ್ ಮತ್ತು ಟಿ. ಗೋಪಾಲ್ ಎಂಬ ಡ್ರೈವರ್‌ಗಳಿಗೆ ಕಿರುಕುಳ ಕೊಟ್ಟ ಇನ್ನೂ ಎರಡು ಕಾರಣಗಳು ಸೇರಿಕೊಂಡವು.

ಈ ಎಲ್ಲವೂ ಸೇರಿ ಕಾರ್ಮಿಕರ ಸಹನೆಯ ಕಟ್ಟೆಯೊಡೆದಾಗ ಜೂನ್ 28ರ ಬೆಳಗಿನ ಜಾವದಿಂದ ಹಠಾತ್ತಾಗಿ ಮುಷ್ಕರ ಆರಂಭವಾಯಿತು.

ಅಂದಿನ ದಿನ ಕಂಪೆನಿಯ ಯಾವುದೇ ಬಸ್ಸು ಕೊಪ್ಪ ಬಿಡಲಿಲ್ಲ. ಹೊರಗಿನಿಂದ ಬಂದ ಎಲ್ಲ ಬಸ್ಸುಗಳೂ ಕಂಪೆನಿಯಲ್ಲಿ ನಿಂತವು. ಯಾರಾದರೂ ಡ್ರೈವರ್–ಕಂಡಕ್ಟರುಗಳು ಡ್ಯೂಟಿ ಮಾಡಲು ಇಷ್ಟಪಟ್ಟರೆ ಪೂರ್ಣ ರಕ್ಷಣೆ ಕೊಡುವುದಾಗಿ ಇನ್‌ಚಾರ್ಜ್ ಸರ್ಕಲ್ ಇನ್ಸ್‌ಪೆಕ್ಟರ್ ಭಂಡಾರಿಯವರ ಮೂಲಕ ಬಂದ ಕರೆಗೆ ಪ್ರತಿಕ್ರಿಯೆ ಸೊನ್ನೆ (ಅಥವಾ ಮೈನಸ್ 3?!?) ಹಾಗೂ ಬಲವಂತವಾಗಿ ಬಸ್ ಬಿಡುತ್ತಾರೆನ್ನಿಸಿದಾಗ ಎಲ್ಲಾ ಬಸ್‌ಗಳ ಒಂದೊಂದು ಚಕ್ರದ ಗಾಳಿ ಬಿಡಲಾಯಿತು.

ಮಧ್ಯಾಹ್ನದ ಹೊತ್ತಿಗೆ ಅಧ್ಯಕ್ಷ ಪಿ.ಎಸ್. ಭಟ್ ಬಂದವರು ಅಷ್ಟು ಹೊತ್ತಿಗೆ ಮಂಗಳೂರಿನಿಂದ ಧಾವಿಸಿ ಬಂದಿದ್ದ ರಮೇಶ ರಾವ್‌ರೊಂದಿಗೆ ಸಂಧಾನ ಯತ್ನ ನಡೆಸಿ ಯಶ ಕಾಣಲಿಲ್ಲ.

ಡಿವೈಎಸ್ಪಿ ಆಗಮನ

ಮಧ್ಯಾಹ್ನದ ನಂತರ ಚಿಕ್ಕಮಗಳೂರಿನ ಡಿವೈಎಸ್ಪಿ ರಮೇಶ್ ಹರಿಹರ ಬಂದರು. ಕಾರ್ಮಿಕರ ವಾದ ಕೇಳಿದ್ದು, "ಒಟ್ಟಿನಲ್ಲಿ ನೋಡಿ, ಶಾಂತಿ ಭಂಗವಾದರೆ ನಾವು ಕಠಿಣ ಕ್ರಮ ಕೈಗೊಳ್ಳಬೇಕಾಗುತ್ತೆ" ಎಂದು 'ಸಮಾಧಾನದಲ್ಲೇ' ಎಚ್ಚರಿಸಿದರು.

ಆಗ ಕಾರ್ಮಿಕ ನಾಯಕರು ಹೇಳಿದರು— "ಇಷ್ಟು ಹೊತ್ತೂ ಸುಮಾರು 8 ಗಂಟೆಗೂ ಹೆಚ್ಚು ಕಾಲ ಯಾವ ಅಹಿತಕರ ಘಟನೆಯೂ ನಡೆದಿಲ್ಲ. ಎಂ.ಡಿ. ಬಂದಾಗ ಒಂದು 'ಧಿಕ್ಕಾರ' ಕೂಡಾ ಹಾಕಲಿಲ್ಲ. ಅಷ್ಟು ಶಿಸ್ತು–ಶಾಂತಿಯಿಂದ ಸುಮಾರು ಇನ್ನೂರೈವತ್ತಕ್ಕೂ ಹೆಚ್ಚು ಜನ ಕಾರ್ಮಿಕರು ವರ್ತಿಸಿದ್ದಾರೆ. ಮಾಲೀಕರು ಈಗಾಗಲೇ ಒಂದು 'ಅನ್‌ಫೇರ್ ಲೇಬರ್ ಪ್ರಾಕ್ಟೀಸ್' (ಕಾರ್ಮಿಕರ ಬಗ್ಗೆ ವಿಹಿತವಲ್ಲದ ನಡವಳಿಕೆ) ಎಸಗಿ ಈ ಪರಿಸ್ಥಿತಿ ಸೃಷ್ಟಿಸಿದ್ದಾರೆ. ಪುನಃ ಇನ್ಯಾವುದಾದರೂ ಹೀನ ತಂತ್ರ ಅಥವಾ ಇನ್ನೊಂದು ಅ.ಲೇ.ಪ್ರಾ. ಎಸಗಿದರೆ ಹತೋಟಿ ಕಷ್ಟವಾಗಬಹುದು.

ಶಾಂತಿ ಭಂಗಕ್ಕೆ ಎರಡೂ ಪಕ್ಷಗಳ ತಪ್ಪು ಕಾರಣವಾಗಬಹುದು. ಕಾರ್ಮಿಕರಿಗೆ ಹೇಳಿದಂತೆಯೇ ಮಾಲೀಕ ವರ್ಗಕ್ಕೂ 'ಶಾಂತಿ ಭಂಗಕ್ಕೆ ಯಾವುದೇ ರೀತಿಯಲ್ಲೂ ಕಾರಣಕರ್ತರಾಗದಿರಲು' ಹೇಳಿ. ಅವರ ಪಾಲೇ ಇದರಲ್ಲಿ ದೊಡ್ಡದು ಎಂಬುದೂ ಅವರಿಗೆ ತಿಳಿದಿರಲಿ. ಹಾಗೆಯೇ ಪೋಲೀಸರು ಮಾಲೀಕರ ಹಿತವನ್ನು ಮಾತ್ರ ಕಾಯುವಲ್ಲಿ ಅತ್ಯುತ್ಸಾಹ ತೋರದಿರಲಿ" ಎಂದರು.

(ನಾಲ್ಕನೇ ಪುಟಕ್ಕೆ)

ಮಾನಸಿಕ ರೋಗದ ಬಗ್ಗೆ ಕಳಂಕದ ಭಯ ಏಕೆ?

ನಮ್ಮ ದೇಹದ ಬಗ್ಗೆ ಮೊದಲು ಯೋಚಿಸೋಣ. ಅದು ಚರ್ಮ, ಅದರ ಒಳಪದರು, ಮಾಂಸ, ಎಲುಬು, ರಕ್ತನಾಳ–ನರತಂತುಗಳಿಂದ ಮಾಡಲ್ಪಟ್ಟಿದೆ. ಇದಲ್ಲದೆ ಅದರಲ್ಲಿ ಜೈವಿಕ ಅಂಗಗಳಾದ ಹೃದಯ, ಮೆದುಳು, ಮೂತ್ರಪಿಂಡಗಳು ಹಾಗೂ ಗ್ರಂಥಿಗಳಿವೆ. ಈ ಎಲ್ಲ ಕೆಲಸವನ್ನು ನಿಯಂತ್ರಿಸುವ ಹಾಗೂ ಅನುಭವಿಸುವ ಅಗೋಚರವಾದ "ಮನಸ್ಸಿದೆ". ದೈಹಿಕ ಭಾಗಗಳು ಪ್ರತಿಯೊಬ್ಬನಲ್ಲೂ ಅನುವಂಶೀಯ ಗುಣಗಳನ್ನು ಹೊತ್ತು, ವಾತಾವರಣದ ಕುಲುಮೆಯಲ್ಲಿ ಹದಗೊಂಡು ಹೊರಬಂದಿರುತ್ತವೆ. ಹಾಗಾಗಿ ಒಬ್ಬನಲ್ಲಿ ಬರುವ ದೈಹಿಕ ರೋಗಗಳು, ಅನುವಂಶೀಯ ಇತಿಹಾಸವನ್ನೂ, ವಾತಾವರಣವನ್ನೂ ಅವಲಂಬಿಸಿರುತ್ತವೆ.

ಉದಾಹರಣೆಗಾಗಿ ಹೃದಯರೋಗವನ್ನು ತೆಗೆದುಕೊಳ್ಳಿ. ಅದರಲ್ಲಿ ಮುಖ್ಯವಾಗಿ ಎದೆಬಡಿತ ಹೆಚ್ಚಾಗಬಹುದು. ಎದೆಬಡಿತ ಹೆಚ್ಚಾದಾಗ ಒಬ್ಬನ ಮನಸ್ಸಿಗೆ ಅತಿಯಾದ ಭಯ, ಉದ್ವೇಗ ಮೂಡಿ ತಾನೇನಾಗಬಹುದೆಂಬ ಆತಂಕ ಮೂಡುತ್ತದೆ. ಇಲ್ಲಿ ಯೋಚಿಸಿದರೆ ಹೃದಯರೋಗ ಮೊದಲು, ಮನಸ್ಸಿನ ಪ್ರತಿಕ್ರಿಯೆ ನಂತರ.

ಒಬ್ಬನಿಗೆ ಅರಿವಿಲ್ಲದೆ ಹಾವು ಎದುರಾದಾಗ ಉಂಟಾಗುವ ಅವನ ಸ್ಥಿತಿಯನ್ನು ಊಹಿಸಿ. ಅವನಲ್ಲಿ ಭಯಭೀತಿ ಮೂಡುತ್ತದೆ, ಹೃದಯದ ಬಡಿತ ಹೆಚ್ಚುತ್ತದೆ. ಹೃದಯ ಒಡೆಯುತ್ತದೆಯೋ ಅಥವಾ ಸ್ತಬ್ಧವಾಗುತ್ತದೆಯೋ ಎಂಬ ಭೀತಿ ಅವನಲ್ಲಿ ತಕ್ಷಣ ಮೂಡುತ್ತದೆ. ಇಲ್ಲಿ ಮಾನಸಿಕವಾದ ಭಯ ಮೊದಲು, ಹೃದಯದ ಬಡಿತ ನಂತರದ್ದು.

ಮೇಲಿನ ಎರಡು ಉದಾಹರಣೆಗಳನ್ನು ಕಂಡಾಗ ನಿಮಗೆ ದೇಹ ಮತ್ತು ಮನಸ್ಸು ಅವಿಭಾಜ್ಯ ಅಂಗ; ಅಂದರೆ ದೇಹದ ಕಾಯಿಲೆಯಂತೆ ಮನಸ್ಸಿಗೂ ಕಾಯಿಲೆ ಬರುವುದು ಎಂದು ಅನಿಸುವುದಿಲ್ಲವೇ? ದೇಹದಂತೆಯೇ ಮನಸ್ಸು ವಂಶವಾಹಕಗಳ ಮೂಲಕ ನಿರ್ದಿಷ್ಟ ಸ್ವಭಾವವನ್ನು ಹೊತ್ತು ತಂದಿರುತ್ತದೆ. ಈ ನಿರ್ದಿಷ್ಟ ಸ್ವಭಾವವು ವಾತಾವರಣದ ಪ್ರೇರಣೆಗೆ ಪ್ರಕ್ರಿಯಿಸಿ ಒಂದು 'ನಿರ್ದಿಷ್ಟ ವ್ಯಕ್ತಿತ್ವ'ದ ಉತ್ಪತ್ತಿಗೆ ಕಾರಣವಾಗಿರುತ್ತದೆ. ಒಬ್ಬನ ವ್ಯಕ್ತಿತ್ವ ಅವನ ನಡತೆಯನ್ನು ನಿರ್ಧರಿಸುತ್ತದೆ. ಅಂದಮೇಲೆ ಒಬ್ಬನ ನಡತೆ ವೈಯುಕ್ತಿಕ ಗುಣಗಳನ್ನಲ್ಲದೆ, ವಾತಾವರಣವನ್ನೂ ಅವಲಂಬಿಸಿರುತ್ತದೆ. ಆದರೆ ಒಬ್ಬನ ನಡತೆಯಿಂದಾಗಿ ಆತನಿಗೆ, ಅಥವಾ ಸುತ್ತಲಿನವರಿಗೆ ತೊಂದರೆ ಆದಲ್ಲಿ ಅವನನ್ನು ಮಾನಸಿಕ ರೋಗಿ ಎಂದು ತಿಳಿಯುತ್ತೇವೆ. ಉದಾಹರಣೆಗೆ ನಿದ್ದೆ ಬಿಡುವುದು, ಆಹಾರ ತ್ಯಜಿಸುವುದು, ಭೀತಿ ಪಡುವುದು, ವೈಯುಕ್ತಿಕವಾಗಿ ತೊಂದರೆ ಆದರೆ ಕೂಗುವುದು, ಹೊಡೆಯುವುದು–ಬೈಯುವುದು, ಕೆಲಸ ಬಿಟ್ಟು ಸುಮ್ಮನಿರುವುದು–ಇವು ತನ್ನ ಸುತ್ತಲಿನವರನ್ನು ತುಂಬಾ ಹಿಂಸಿಸುತ್ತವೆ.

ಡಾ| ಯು. ಅರುಣಾಚಲ,
ಎಂ.ಬಿ.ಬಿ.ಎಸ್., ಡಿ.ಪಿ.ಎಂ.,
ಮಾನಸಿಕ ರೋಗ ತಜ್ಞರು,
ಮಾನಸ ನರ್ಸಿಂಗ್ ಹೋಂ, ತೀರ್ಥಹಳ್ಳಿ

ಆರ್ಥಿಕ ಮುಗ್ಗಟ್ಟಿನಲ್ಲಿದ್ದ ಒಬ್ಬ ವ್ಯಕ್ತಿ ನಿರುದ್ಯೋಗಿ ಆದಲ್ಲಿ ಅವನಲ್ಲಿ ನಿದ್ರಾಹೀನತೆ, ಉದ್ವೇಗ, ಹಸಿವು ಇಲ್ಲದಿರುವ ಸ್ಥಿತಿ ಬರುವ ಸಾಧ್ಯತೆ ಇರುವುದಲ್ಲದೆ, ಅವನ ಸಿಟ್ಟು–ಕೋಪದಿಂದಾಗಿ ಇತರರಿಗೆ ತೊಂದರೆ ಆಗಲೂ ಬಹುದು. ನಿರುದ್ಯೋಗ ಸ್ಥಿತಿ ನಮ್ಮಲ್ಲಿ ಸಾಮಾಜಿಕ ಪಿಡುಗು. ನಮ್ಮ ಸಾಮಾಜಿಕ ವ್ಯವಸ್ಥೆಯನ್ನು ಪ್ರತಿಬಿಂಬಿಸುವ ಕೂಸು. ಈ ಸ್ಥಿತಿಯನ್ನು ಅರ್ಥ ಮಾಡಿಕೊಳ್ಳದೆ ನಾವು ನಿರುದ್ಯೋಗಿಯನ್ನು ಭಿನ್ನವಾಗಿ ಕಾಣುವುದನ್ನು, ಮೂದಲಿಸುವುದನ್ನು ಪ್ರಾರಂಭಿಸುತ್ತೇವೆ. ಪರಿಸರದ ಈ ವರ್ತನೆಯಿಂದ ಅವನು ಮಾನಸಿಕ ರೋಗಿಯಾಗಿ ಹೆಪ್ಪುಗಟ್ಟಿದರೆ ವಿಶೇಷವಲ್ಲ.

ವಿಷಮಶೀತ ಜ್ವರದಿಂದ (ಟೈಫ್ಯಾಯ್ಡ್) ಬಳಲುತ್ತಿರುವ ವ್ಯಕ್ತಿಯೊಬ್ಬ ಮಾನಸಿಕವಾಗಿ ವಿಭಿನ್ನವಾಗಿ ವರ್ತಿಸುವುದನ್ನು ನಾವು ಕಾಣುತ್ತೇವೆ. ಅವನೂ ನಿದ್ರಾಹೀನತೆಯಿಂದ ಬಳಲುವುದು, ಭ್ರಮೆಯಲ್ಲಿ ನಿರತನಾಗುವುದು, ರೇಗುವುದನ್ನು ನೋಡುತ್ತೇವೆ. ಅವನಲ್ಲಿ ಮಾನಸಿಕ ರೋಗದ ಲಕ್ಷಣಗಳನ್ನು ನೋಡಬಹುದು.

ಆದರೆ ಒಬ್ಬ ನಿರುದ್ಯೋಗಿ ಮಾನಸಿಕ ರೋಗಿಯನ್ನು ನಾವು ನೋಡುವ ರೀತಿಯು ಒಬ್ಬ ವಿಷಮಶೀತ ಜ್ವರದ ಮಾನಸಿಕ ರೋಗಿಯನ್ನು ನೋಡುವ ರೀತಿಗಿಂತ ತೀರ ಭಿನ್ನವಾಗಿರುತ್ತದೆ. ಎರಡನೆಯ ಮಾನಸಿಕ ಸ್ಥಿತಿಯ ಬಗ್ಗೆ ನಮಗೆ "ಮಾನಸಿಕ ರೋಗ ಕಳಂಕ"ದ ಭಯ ಇರುವುದಿಲ್ಲ. ಇದಕ್ಕೆ ಕಾರಣ 'ಜ್ವರ ನೆತ್ತಿಗೇರಿದೆ' ಎಂದು ನಾವು ಸಂತೈಸಿಕೊಳ್ಳುತ್ತೇವೆ. ಆದರೆ "ನಿರುದ್ಯೋಗಿ ಮಾನಸಿಕ ರೋಗಿ"ಯ ಬಗ್ಗೆ ಆತನ ಮನೆಯವರೂ, ಆತನೂ ರೋಗದ ಕಳಂಕದ ಭಯವನ್ನು ತಾಳುತ್ತಾರೆ. ಬೇರೆಯವರಿಗೆ ತಿಳಿದರೆ ಏನಾಗಬಹುದೋ ಎಂಬ ಅಂಜಿಕೆ ಅದನ್ನು ಮುಚ್ಚಿಡಲು ಪ್ರಯತ್ನಿಸುತ್ತದೆ.

ಸಾರಾಂಶದಲ್ಲಿ ಹೇಳುವುದಾದರೆ 'ವಿಷಮಶೀತ ಜ್ವರ'ದ ಮಾನಸಿಕ ರೋಗಿಗೆ ವಾತಾವರಣದ ಟೈಫಾಯಿಡ್ ಕ್ರಿಮಿಗಳು ರೋಗಕ್ಕೆ ಕಾರಣವಾದರೆ, 'ನಿರುದ್ಯೋಗಿ ಮಾನಸಿಕ ರೋಗಿ'ಗೆ 'ವಾತಾವರಣ'ದ 'ನಿರುದ್ಯೋಗ' ರೋಗಕ್ಕೆ ಕಾರಣ ಎಂದು. ಆದರೆ ಇವೆರಡರಲ್ಲೂ ಮುಖ್ಯವಾಗಿ ವಾತಾವರಣದ ನ್ಯೂನತೆಗಳು ರೋಗವನ್ನು ಹೆಪ್ಪುಗಟ್ಟಿಸಿರುತ್ತವೆ. ಒಂದು ರೀತಿಯಲ್ಲಿ ಮಾನಸಿಕ ರೋಗಿ "ಅಸಹಜ ಸಮಾಜದ ಸಹಜ ವ್ಯಕ್ತಿ".

ಮಹಾಯುದ್ಧಗಳ ಸಮಯದಲ್ಲಿ ಎಂದೂ ಇಲ್ಲದಂತಹ ಹಿಸ್ಟೀರಿಯಾ ರೋಗ ಸೈನಿಕರಲ್ಲಿ ಹಾಗೂ ಜನರಲ್ಲಿ ಕಾಣಿಸಿಕೊಂಡಿತು. ಇದಕ್ಕೆ ಕಾರಣ ಆಗ ಒತ್ತಾಯಪೂರ್ವಕವಾಗಿ ಸೈನ್ಯಕ್ಕೆ ಸೇರಿಸುವುದು ಹಾಗೂ ಸೆರೆಹಿಡಿದು ಕಾರಾಗೃಹದಲ್ಲಿ ಇಡುವುದು ಸಾಧಾರಣವಾಗಿತ್ತು. ರಣರಂಗಕ್ಕೆ ಹೋಗಿ ಉಳಿದು ಹಿಂದಿರುಗಿದ ಸೈನಿಕರು ಜ್ಞಾಪಕಶಕ್ತಿ ಇಲ್ಲದಂತೆ ವರ್ತಿಸುವುದು ಸಹಜವಾಗಿತ್ತು. ಯುದ್ಧದ ಭೀತಿಯಿಂದ ತಪ್ಪಿಸಿಕೊಳ್ಳುವುದೇ ರೋಗದ ಪಾತ್ರಕ್ಕೆ ಕಾರಣವಾಗಿತ್ತು.

ನಮ್ಮಲ್ಲಿ ತುರ್ತುಪರಿಸ್ಥಿತಿಯ ಸಮಯದಲ್ಲಿ ಅನೇಕರು ಪ್ರತಿಭೀತಿಯಿಂದ, ನಿದ್ರಾಹೀನತೆಯಿಂದ ಬಳಲಿದರು. ಪೋಲೀಸರ ಹೆಜ್ಜೆಯ ಸಪ್ಪಳ ಕೇಳಿದಂತೆ ಭಾಸವಾಗುವುದು–ಇದರಿಂದುಂಟಾದ ಕಾತುರದಿಂದಾಗಿ ನಿದ್ರಾಹೀನತೆ–ಇವು ಮಾನಸಿಕ ಅಸಮತೋಲನಕ್ಕೆ ರಾಜಕೀಯ ಪಾತ್ರವನ್ನು ಪ್ರತಿಬಿಂಬಿಸುತ್ತವೆ.

ನಾನು ಹೇಳ ಬಯಸುವುದು ಇಷ್ಟು– ಮಾನಸಿಕ ರೋಗಿ ಯಾವುದೋ ವ್ಯವಸ್ಥೆಗೆ ಪ್ರಕ್ರಿಯಿಸಿರುತ್ತಾನೆ. ಅವನನ್ನು ನೀವು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿ. ಅವನ ಸ್ಥಿತಿಯನ್ನು ಮುಚ್ಚಿಡಲು ಪ್ರಯತ್ನಿಸಿದಷ್ಟೂ ಅವನಿಂದ ನಾವು ದೂರ ಹೋಗುತ್ತೇವೆ. ಆದುದರಿಂದ ಅವನೂ ನಮ್ಮಂತೆ ಪರಿಸರಕ್ಕೆ ಬಂದು ಬೆಳೆಯಬೇಕು. ಮುಚ್ಚಿಟ್ಟರೆ ಅವನು ಬೆಳೆಯುವುದಿಲ್ಲ. ಬದಲಾಗಿ ಅತೀವ ಮಾನಸಿಕ ತೊಳಲಾಟದಿಂದ ಬೇಯಬೇಕಾಗುತ್ತದೆ. 'ರೋಗ ಕಳಂಕದ ಭಯ' ಬಿಟ್ಟು ಚಿಕಿತ್ಸೆ ಕೊಡಿಸಿದಲ್ಲಿ ಅವನೂ ಸಮಾಜದ ನಮ್ಮ ನಿಮ್ಮೆಲ್ಲರಂತೆ ಆದಾನು.

(ಸೌಜನ್ಯ: 'ತೀರ್ಥಹಳ್ಳಿ ಗ್ರಾಮಭಾರತಿ')

ಅಡಿಕೆ ಬೆಳೆ ಆರೈಕೆಯ ಬಗ್ಗೆ ಕೆಲವು ತಜ್ಞ ವಿಚಾರಗಳು

ಜೂನ್ 22ರಂದು ಬಿಳಾಲುಕೊಪ್ಪದಲ್ಲಿ ಮೇರುತಿ ಜೇಸೀಸ್ ಮತ್ತು ಕೃಷಿ ವಿಚಾರ ವಿನಿಮಯ ಕೇಂದ್ರದ ಸಂಯುಕ್ತ ಆಶ್ರಯದಲ್ಲಿ ಅಡಿಕೆ ಬೆಳೆ ವಿಚಾರ ಸಂಕಿರಣವೊಂದು ನಡೆಯಿತು. ವಿಟ್ಲದ ಕೇಂದ್ರೀಯ ತೋಟಗಾರಿಕೆ ಬೆಳೆಗಳ ಸಂಶೋಧನಾ ಕೇಂದ್ರದ ನಿವೃತ್ತ ಜಂಟಿ ನಿರ್ದೇಶಕರಾದ ತೀರ್ಥಹಳ್ಳಿಯ ಶ್ರೀ ಕೆ. ಎಸ್. ಮೂರ್ತಿ ಭಾಷಣ ಮಾಡಿದರು. ಅನಂತರ ರೈತರಿಂದ ಬಂದ ಪ್ರಶ್ನೆಗಳಿಗೆ ಉತ್ತರ ನೀಡಿದರು.

ಈ ಭಾಷಣ ಮತ್ತು ಪ್ರಶ್ನೋತ್ತರಗಳ ಒಟ್ಟು ಸಾರಾಂಶವನ್ನು ಇಲ್ಲಿ ಕೊಡಲಾಗಿದೆ.

ವರದಿ: ಕ. ಸು. ರಾಮಚಂದ್ರ

ಮಲೆನಾಡಿನಲ್ಲಿ ಅಡಿಕೆಯು ರೈತರ ಪ್ರಥಮ ಆರ್ಥಿಕ ಬೆಳೆ. ನಂತರದ ಸಾಲಿನಲ್ಲಿ ಏಲಕ್ಕಿ, ಕಾಳುಮೆಣಸು, ವೀಳಯದೆಲೆಗಳು ಬರುತ್ತವೆ. ಕಾಫಿಯು ಆರ್ಥಿಕ ಬೆಳೆಯಾಗಿದ್ದರೂ ಅದೊಂದು ಸಾಮಾನ್ಯ ರೈತರ ಆರ್ಥಿಕ ಬೆಳೆಯಾಗಿಲ್ಲ.

ಅಡಿಕೆ ನಮ್ಮ ದೇಶದಲ್ಲಿ ಒಂದು ಲಕ್ಷ ಎಂಭತ್ನಾಲ್ಕು ಸಾವಿರದ ಐದುನೂರು ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯುತ್ತಿದೆ. ಅಸ್ಸಾಂ, ನಾಗಲ್ಯಾಂಡ್, ಹರಿಯಾಣಗಳಲ್ಲಿ ಬೆಳೆಯುವ ಅಡಿಕೆ ತೂಕ ಜಾಸ್ತಿಯಿರುತ್ತದೆ. ದಕ್ಷಿಣದ ರಾಜ್ಯಗಳ ಅಡಿಕೆಯ ತೂಕ ಕಮ್ಮಿ. ಮಹಾರಾಷ್ಟ್ರದ ರತ್ನಗಿರಿಯ ಅಡಿಕೆ ಉತ್ತಮ ಗುಣಮಟ್ಟದ್ದೂ ತೂಕವುಳ್ಳದ್ದೂ, ಮಾರುಕಟ್ಟೆಯಲ್ಲಿ ಅತ್ಯಂತ ಬೆಲೆಯುಳ್ಳದ್ದೂ ಆಗಿದೆ. ಕೇರಳಕ್ಕೂ ಕರ್ನಾಟಕಕ್ಕೂ ಹೋಲಿಸಿದರೆ, ದಕ್ಷಿಣ ಕನ್ನಡದ ಅಡಿಕೆಯ ತೂಕ ಜಾಸ್ತಿ ಇರುತ್ತದೆ.

ಸುಧಾರಿತ ತಳಿಗಳು:

ಅಡಿಕೆಯಲ್ಲಿ ಹಲವು ಸುಧಾರಿತ ತಳಿಗಳನ್ನು ಅಭಿವೃದ್ಧಿ ಪಡಿಸಲಾಗಿದೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ:

(1) 'ಮಂಗಳಾ' (ವಿ. ಟಿ ಎಲ್.–3) ಇದು ಗಿಡ್ಡ ತಳಿ. ಇದು ದ. ಕ. ಜಿಲ್ಲೆಯಲ್ಲಿ ನಾಲ್ಕೂವರೆ ವರ್ಷಕ್ಕೆ ಫಲ ಕೊಡುತ್ತದೆ. ಮಲೆನಾಡಿನಲ್ಲಿ 6 ವರ್ಷದೊಳಗೆ ಫಲ ಕೊಡುತ್ತದೆ. ಇದು ಸ್ವಲ್ಪ ಏರಿಕೆಯ ಪ್ರದೇಶದಲ್ಲಿರುವ ತೋಟಗಳಿಗೆ ಸೂಕ್ತವಾಗಿದೆ.

(2) ಸೈಗಾನ್–2 ಮತ್ತು ಸಿಂಗಪುರ್: ಇವು ಎತ್ತರ ಬೆಳೆಯುವ ತಳಿಗಳು. ತಗ್ಗಿನ ಪ್ರದೇಶಗಳಿಗೆ ಸೂಕ್ತವಾದುವು. ನಾಲ್ಕೂವರೆ ವರ್ಷಕ್ಕೆ ಫಸಲು ಬರುತ್ತದೆ. (ಮಲೆನಾಡಿನಲ್ಲಿ 6 ವರ್ಷ.)

ಬಿತ್ತನೆಯ (ಬೀಜದ) ಆಯ್ಕೆ:

(1) ಸಸಿ ಬೆಳೆಸುವುದಕ್ಕಾಗಿ, ಮೊದಲು ಸಿಂಗಾರ ಬೀಸುವ ಬಿತ್ತನೆಯನ್ನೇ ಆಯ್ಕೆ ಮಾಡಬೇಕು. ಇದರಿಂದ ಪರಕೀಯ ಪರಾಗಸ್ಪರ್ಶಕ್ಕೊಳಗಾಗದಿರುವ ಅಡಿಕೆಯನ್ನೇ ಬೀಜವಾಗಿ ಬಳಸಿದಂತಾಗುತ್ತದೆ. ಇದರಿಂದ ಅನುವಂಶಿಕ ಗುಣಗಳನ್ನು ಶೇ. 72 ರಷ್ಟು ಉಳಿಸಿಕೊಳ್ಳಬಹುದೆಂದು ಪ್ರಯೋಗಗಳಿಂದ ಕಂಡು ಬಂದಿದೆ. ಅನಂತರ ಬಿಟ್ಟ ಗೊನೆಗಳಲ್ಲಿ ಅನುವಂಶಿಕತೆ ಶೇ. 30ರಷ್ಟು ಮಾತ್ರ ಉಳಿಯಲು ಸಾಧ್ಯ. ಅಡಿಕೆ ಬಹುವಾರ್ಷಿಕ ಬೆಳೆಯಾದ್ದರಿಂದ ಈ ವಿಚಾರದಲ್ಲಿ ಬಹಳ ಎಚ್ಚರಿಕೆ ವಹಿಸಬೇಕಾಗುತ್ತದೆ. ಮರ ದಷ್ಟ ಪುಷ್ಟವಾಗಿದ್ದು, ಕನಿಷ್ಠ 5 ಗರಿ ಇರಬೇಕು; (?) ಗೊನೆಯು ಚೆನ್ನಾಗಿ ಬಲಿತಿದ್ದು, ರೋಗ–ಕೀಟರಹಿತವಾಗಿರಬೇಕು.

(3) ಕಾಯಿಗಳು ಒಂದೇ ಗಾತ್ರವಾಗಿದ್ದು, ಗೊನೆಯಲ್ಲಿ ತುಂಬಾ ಕಾಯಿಗಳು ಹಿಡಿದಿರಬೇಕು.

ಸಸಿ ತಯಾರಿಕೆ:

ರೈತರು ಸಾಮಾನ್ಯವಾಗಿ ಅನುಸರಿಸುತ್ತಿರುವ ಕ್ರಮವನ್ನೇ ಮುಂದುವರಿಸಬಹುದು. ಮೊದಲ ಹಂತದಲ್ಲಿ ಬೀಜದಿಂದ ಬೀಜಕ್ಕೆ 5 ಅಥವಾ 6 ಸೆಂ. ಮೀ. ಅಂತರವಿರಬೇಕು. 2ನೇ ಹಂತದಲ್ಲಿ ಪಾತಿಯ ಅಗಲ 5 ಅಡಿ ಮಾತ್ರ ಇರಬೇಕು. ಉದ್ದ ಅಗತ್ಯಕ್ಕೆ ತಕ್ಕಂತೆ ಇರಬಹುದು. ಪಾತಿಯಲ್ಲಿ ಕಳಿತ ಹಟ್ಟಿಗೊಬ್ಬರ, ಕಾಡುಗೊಬ್ಬರ ಮತ್ತು ಮರಳಿನ ಮಿಶ್ರಣ ಇರಬೇಕು. ಗಿಡದಿಂದ ಗಿಡಕ್ಕೆ 30 ಸೆಂ. ಮೀ. ಅಂತರವಿರಬೇಕು.

ತೋಟದಲ್ಲಿ ಸಸಿಗಳನ್ನು ನಾಟುವುದು:

ಬಿಸಿಲು ಬೀಳುವ ಪ್ರದೇಶದಲ್ಲಿ ನೆರಳಿನ ಗಿಡಗಳನ್ನು ಬೆಳೆಸಿ ಅಡಿಕೆ ಗಿಡಗಳನ್ನು ನಾಟಿ ಮಾಡಬೇಕು. ಪಶ್ಚಿಮದ ಬಿಸಿಲನ್ನು ತಡೆಯಲು ತೋಟದ ಮಧ್ಯ

(ಮೂರನೇ ಪುಟಕ್ಕೆ)

ಓದುಗರ ಪತ್ರ

ರೇಂಜರ್ ಲಕ್ಷ್ಮೀನಾರಾಯಣರ ದಕ್ಷತೆಯ. ಇನ್ನೊಂದು ಮುಖ

ಮಾನ್ಯರೆ,

ನಿಮ್ಮ 22-6-86ರ ಸಂಚಿಕೆಯಲ್ಲಿ ಶೃಂಗೇರಿಯ ರೇಂಜರ್ ಬಗ್ಗೆ ಶ್ರೀಯುತ ಕಲ್ಕುಳಿ ವಿಠಲ ಹೆಗ್ಡೆಯವರು ಬರೆದಿರುವ ವಿಚಾರಗಳು ವರ್ಗವಾಗಿ ಹೋಗುತ್ತಿರುವ ಒಬ್ಬ ಅಧಿಕಾರಿಗೆ ಅಪ್ಯಾಯಮಾನವಾಗಿ ಕಾಣಬಹುದಾದರೂ ಈ ವಿಚಾರಕ್ಕೆ ಇನ್ನೊಂದು ಮುಖವೂ ಇದೆ ಎಂದು ನನಗೆ ಅನ್ನಿಸುತ್ತಿದೆ.

ಲಕ್ಷ್ಮೀನಾರಾಯಣ ಅವರ ಕಾಲದಲ್ಲಿ ಅರಣ್ಯ ಲೂಟಿ ಬಹಳ ಮಟ್ಟಿಗೆ ನಿಂತಿತ್ತು ಎಂಬುದರಲ್ಲಿ ಸಂದೇಹವಿಲ್ಲ. ಆದರೆ ಇದೇ ಕೆಲಸವನ್ನು ಅವರು ಮಾನವೀಯತೆಯ ಚೌಕಟ್ಟನ್ನು ಮೀರದೆಯೇ ಮಾಡಬಹುದಿತ್ತು ಎಂಬುದೂ ಅಷ್ಟೇ ನಿಜ.

"ಕೆಲವು ಬಡ ಬಗ್ಗರ ಪ್ರಕರಣಗಳಲ್ಲಿ ಅವರ 'ದಕ್ಷತೆ'ಯ ಅತಿರೇಕ (ವಿಪರೀತ ಹೊಡೆತ ಇತ್ಯಾದಿ)" ವಿಠಲ ಹೆಗ್ಡೆಯವರು ಹೇಳುವಂತೆ ಕೇವಲ 'ಸಣ್ಣ ಪುಟ್ಟ ದೋಷ'ವಾಗಿರದೆ ಅದೊಂದು ಅಮಾನುಷವೆನ್ನಬಹುದಾದಷ್ಟು ದೊಡ್ಡ ದುರ್ಗುಣವಾಗಿತ್ತೆಂಬುದು ಬಹುತೇಕ ಸಣ್ಣ ಪುಟ್ಟ ರೈತರೆಲ್ಲರ ಅನಿಸಿಕೆಯೆಂದು ನನ್ನ ತಿಳುವಳಿಕೆ.

ಏಕೆಂದರೆ ಇಂದಿನ ಪರಿಸ್ಥಿತಿಯಲ್ಲಿ ಕಷ್ಟದಿಂದ ಹೇಗೋ ಒಂದು ಮನೆ ಕಟ್ಟಬೇಕಾದ ಸಣ್ಣ ರೈತ ಕಾನೂನಿನ 'ಹರ್ಡಲ್ಸ್'ಗಳನ್ನೆಲ್ಲಾ ದಾಟಿ—ಅದಕ್ಕಿಂತ ಮುಖ್ಯವಾಗಿ ಆ 'ಹರ್ಡಲ್ಸ್'ಗಳನ್ನು ಕಾಯುತ್ತಿರುವ ಸಿಬ್ಬಂದಿ ಹೊಂಡಗಳನ್ನೆಲ್ಲಾ ತುಂಬಿಸಿ—ಗೆದ್ದು ಬರುವುದು ಒಂದು ರಮ್ಯ ಕಲ್ಪನೆ ಮಾತ್ರವೇನೋ! ಹೀಗಾಗಿ ಆತ ಅನಧಿಕೃತವಾಗಿಯೇ ಸ್ವಲ್ಪ ನಾಟ ಕಡಿಯಬೇಕಾಗುತ್ತದೆ. ಆದರೆ ಈ 'ಅನಧಿಕೃತತೆ'ಗೂ ಕಳ್ಳ ಸಾಗಾಣಿಕೆಗೂ ಅಜ ಗಜಾಂತರ. ಆದರೂ ಇಂಥ ಸಂದರ್ಭಗಳಲ್ಲಿ ಸಹ ಅಧಿಕಾರಿಗಳಿಗೆ ದೂರುಗಳು ಹೋಗುತ್ತವೆ. ಆದರೆ ನಿಜವಾಗಿಯೂ ಪ್ರಾಮಾಣಿಕರೂ ಮಾನವೀಯತೆಯುಳ್ಳವರೂ ಆದ ಅಧಿಕಾರಿಗಳು ಇಂಥ ದೂರುಗಳ ಯಥಾರ್ಥತೆಯನ್ನು ಪರಿಶೀಲಿಸಿ, ಅವನ್ನು ಕಡೆಗಣಿಸುತ್ತಾರೆ. ಆದರೆ ತಾನೊಬ್ಬ ಮಹಾ ನಿಷ್ಠಾವಂತ ಮತ್ತು ಮುಲಾಜಿಲ್ಲದ ಅಧಿಕಾರಿ ಎಂದು ತೋರಿಸಿಕೊಳ್ಳಬೇಕೆನಿಸುವ ಅಧಿಕಾರಿಗಳು ಮಾತ್ರ ಈ ಸಣ್ಣ ಪ್ರಕರಣಗಳನ್ನೇ ದೊಡ್ಡದು ಮಾಡಿ ಜನಸಾಮಾನ್ಯರಿಗೆ ಹಿಂಸೆ ಕೊಡುತ್ತಾರೆ. ಲಕ್ಷ್ಮೀನಾರಾಯಣರಿಂದ ಇಂಥದು ಎಷ್ಟು ನಡೆದಿರಬಹುದು?

ಒಂದು ಉದಾಹರಣೆ.

ಹಳ್ಳಿಯೊಂದರ ಸಾಮಾನ್ಯ ರೈತರೊಬ್ಬರು ಜಖಂ ಆಗಿದ್ದ ಕೊಟ್ಟಿಗೆ ದುರಸ್ತಿಗಾಗಿ 2 ಬಲಿಗೆ ತೋಳುಗಳನ್ನು ಕಡಿದಿದ್ದರು. ದನವೊಂದನ್ನು ಹುಲಿ ಹಿಡಿದುದರ ಮಹಜರಿಗೆ ಆ ಹಳ್ಳಿಗೆ ಬಂದಿದ್ದ ಗಾರ್ಡ್, ಮಹಜರಿಗೆ ಸಹಿ ಬೇಕೆಂದು ಒಂದು ಖಾಲಿ ಕಾಗದವನ್ನು ಸತ್ತ ದನದ ಒಡೆಯನ ಕೈಲಿ ಕೊಟ್ಟು ಊರೊಳಗೆ ಕಳಿಸಿದ. ಆದರೆ ಮಹಜರು ಬರೆದು ಸಹಿ ಪಡೆಯಬೇಕೆಂದು ಊರವರು ಹೇಳಿದ್ದರಿಂದ ತಾನೇ ಬಂದು, ಆಲೆಮನೆಯಲ್ಲಿ ಕಬ್ಬಿನ ಹಾಲು, ಬೆಲ್ಲದ ಸೇವನೆ ಸಾಂಗವಾಗಿ ಪೂರೈಸಿ, ರೇಂಜರು ಮಹಜರ್ ನಡೆಸಿದಂತೆ ಬರೆದು ಸಹಿ ಪಡೆದ.

ಆನಂತರ ಬಲಿಗೆ ತೋಳುಗಳನ್ನು ನೋಡಿ 'ಕಾನೂನು' ತೆಗೆದಾಗ ಆ ರೈತರ ಮಗ ಹೇಳಿದರು—ಇಷ್ಟು ಸಣ್ಣದಕ್ಕೆಲ್ಲ ಕಾನೂನು ಅಂತ ಹೋದ್ರೆ ಆಗುತ್ತೇನ್ರಿ? ಈಗ ನೀವು ಗಾರ್ಡ್ ಬಂದು ರೇಂಜರ್ ಬಂದಂತೆ ಬರೆದು ಸಹಿ ಪಡೆಯಲಿಲ್ಲವಾ?" ಎಂದರು. ಇಷ್ಟಕ್ಕೇ ಕೆರಳಿದ ಆತ, ಏನ್ರೀ 'ಕೇವಲ ಒಬ್ಬ ಗಾರ್ಡ್' ಅಂತ ಹೇಳ್ತೀರೇನ್ರಿ? ನಿಮಗೆ ಕಲಿಸ್ತೇನಿ ತಾಳಿ!" ಎಂದು ಹೋದವ ಲಕ್ಷ್ಮೀನಾರಾಯಣರಿಗೆ 'ಸೂಕ್ತ'ವಾಗಿ 'ವರದಿ' ಮಾಡಿರಬೇಕು. ಅಂತೂ ಆ ರೈತ ಯುವಕನ ಮೇಲೆ ಕೇಸು ಹಾಕಿ, ದಂಡ ವಿಧಿಸಿ, ಸಾಕಷ್ಟು ಕಿರುಕುಳ ಕೊಟ್ಟರು.

ಇಂಥ ಅಮಾನುಷ, ಅನಾಗರಿಕ ವರ್ತನೆ ಕೇವಲ ಸಣ್ಣ ಪುಟ್ಟ ದೋಷ ಎನ್ನಬಹುದೆ? ಸಾಮಾನ್ಯ ಜನರೊಂದಿಗೆ ಕ್ರೂರವಾಗಿ ವರ್ತಿಸದೆಯೂ ಅವರು ಕಳ್ಳ ಸಾಗಾಣಿಕೆ ತಡೆಯಬಹುದಿತ್ತಲ್ಲವೆ?

ಇನ್ನು "ಅವರ ಕಾಲದಲ್ಲಿ ನೆಟ್ಟು ಬೆಳಸಿದ ಪ್ಲಾಂಟೇಶನ್‌ಗಳ" ವಿಚಾರ. ಕೇವಲ ಎರಡೇ ವರ್ಷದಲ್ಲಿ ಯಾವುದೇ ಪ್ಲಾಂಟೇಶನ್ ಬೆಳೆಯುವುದಿಲ್ಲ ಅಲ್ಲವೆ? ಅವರ ಮೇಲೆ ಅವರ ದಕ್ಷತೆ ಅಳೆಯಲು ಬರುತ್ತದೆಯೆ? ಅವರು ಪ್ಲಾಂಟೇಶನ್ ಮತ್ತು ನರ್ಸರಿಗಳ ಬಗ್ಗೆ ಮುತುವರ್ಜಿ ವಹಿಸಿರಬಹುದು, ಅಷ್ಟೆ.

ಲಕ್ಷ್ಮೀನಾರಾಯಣರ ಇನ್ನೊಂದು ಸ್ವಭಾವ—ತಾನೊಬ್ಬ ಮಹಾ ಮೇಧಾವಿ ಮತ್ತು ಆಗರ್ಭ ಶ್ರೀಮಂತ ಎಂದು ತೋರಿಸಿಕೊಳ್ಳುವುದು. ಆಗಾಗ್ಗೆ ಅವರಿವರ ಹತ್ತಿರ ಕೊಚ್ಚಿಕೊಳ್ಳುವಾಗ, ತಮ್ಮ ನಾಲಿಗೆ ಹೊರಗೆ ಕಾಣಿಸಿ "ನಮಗೆ ಕಾನೂನು ಅಂದರೆ ಎಲ್ಲಾ ಇಲ್ಲೇ ಇರುತ್ತೆ, ನೋಡಿ" ಎನ್ನುತ್ತಿರುತ್ತಾರೆ. ಆದರೆ ಇವರ ಮೇಲಾಫೀಸಿನ ಹಿರಿಯ ಸಿಬ್ಬಂದಿ ಇವರ ಕಾನೂನು ಪಾಂಡಿತ್ಯದ ಬಗ್ಗೆ ಬಹಳ ಚೆನ್ನಾಗಿ ಹೇಳುತ್ತಾರೆ. ಜೊತೆಗೆ ವಿವಿಧ ಸಂದರ್ಭಗಳನ್ನು, ಪ್ರಕರಣಗಳನ್ನು ನಿರ್ವಹಿಸುವ ರೀತಿ ಸಹ ಬಹಳ ಅಸಮರ್ಪಕ ಮತ್ತು ಹಾಸ್ಯಾಸ್ಪದವಾಗಿರುತ್ತದೆ ಎಂದೂ ಹೇಳುತ್ತಾರೆ.

ಒಬ್ಬ ಭಾರೀ ಶ್ರೇಷ್ಠ ಅಧಿಕಾರಿಯೆಂಬಂತೆ ಹೊಗಳಲ್ಪಡುತ್ತಿರುವ ಲಕ್ಷ್ಮೀನಾರಾಯಣರಲ್ಲಿರಬಹುದಾದ ಯಾವುದೇ ಒಳ್ಳೆಯ ಗುಣಗಳ ಜೊತೆಗೆ ಅಷ್ಟೇ ಮಹತ್ತಾದ ದೋಷಗಳು ದೌರ್ಬಲ್ಯಗಳೂ (ವೈಯಕ್ತಿಕ ದೌರ್ಬಲ್ಯಗಳಲ್ಲದೆ) ಇವೆಯೆಂಬ ಬಗ್ಗೆ ಇವು ಕೆಲವು ಸಂಗತಿಗಳು ಮಾತ್ರ.

ಇವರ ಎತ್ತಂಗಡಿಗೆ ಪಟ್ಟಭದ್ರರು, 'ಬೇಳೆ ಕಾಳಿನವರು' ಕುತಂತ್ರ ನಡೆಸಿರಬಹುದು ಆದರೆ ಶೃಂಗೇರಿ ವಲಯದ ಕಾಡುಗಳ ಪಾಲಿಗೆ ಹಾಗೂ ಇಲ್ಲಿನ ಸಾಮಾನ್ಯ ರೈತಾಪಿ ಜನರ ಪಾಲಿಗೆ ಏನೋ ಮಹತ್ತಾದ ನಷ್ಟವಾಯಿತೆಂಬ ಮಾತಂತೂ ಸತ್ಯವಲ್ಲ—ಅದೂ ಗಫಾರ್‌ರಂಥ ಸೌಮ್ಯ, ಆದರೆ ಕಟ್ಟುನಿಟ್ಟಿನ ವಲಯಾಧಿಕಾರಿ ಬರುತ್ತಿರುವಾಗ ಎಂದಷ್ಟೇ ಹೇಳಬಯಸುತ್ತೇನೆ. ಗಫಾರ್‌ರವರಾದರೂ ಕಾಡುಕಳ್ಳ ಪುಡಾರಿಗಳ ಬಗ್ಗೆ ಯಾವ ಮುಲಾಜನ್ನು ತೋರಿಸದಿರಲಿ ಎಂದು ಆಶಿಸುತ್ತೇನೆ. —**ಗುಂಡಪ್ಪ**, ಶೃಂಗೇರಿ.

ಅಡಿಕೆ ಬೆಳೆ ಆರೈಕೆಯ ಬಗ್ಗೆ ಕೆಲವು ತಜ್ಞ ವಿಚಾರಗಳು

(2ನೇ ಪುಟದಿಂದ)

ಭಾಗದಲ್ಲಿ ಉತ್ತರ–ದಕ್ಷಿಣ ರೇಖೆಯನ್ನು ಗುರ್ತಿಸಿಕೊಂಡು ಇದಕ್ಕೆ ದಕ್ಷಿಣದಿಂದ ಪಶ್ಚಿಮದ ಕಡೆಗೆ 35 ಡಿಗ್ರಿ ಕೋನದಷ್ಟು ಅಂತರದಲ್ಲಿ ಸಮಾನಾಂತರ ರೇಖೆಗಳನ್ನು ಗುರುತು ಮಾಡಿಕೊಂಡು, ಆ ರೇಖೆಯಲ್ಲಿ 2.7 ಮೀಟರ್ ಅಂತರದಲ್ಲಿ ಸಸಿಗಳನ್ನು ನಾಟಿ ಮಾಡಬೇಕು ಹೊಂಡ ಒಂದು ಘನ ಮೀಟರ್ ಇರಬೇಕು. (1 ಮೀ. ಉದ್ದ, 1 ಮೀ. ಅಗಲ 1 ಮೀ. ಆಳ.)

ಗಿಡಗಳ ಮಧ್ಯೆ ಶೇ.25 ಭಾಗ **ಕೊಕೋ** ಬೆಳೆಯಬಹುದು ತೋಟದಲ್ಲಿ ಗಿನಿ **ಗ್ರ್ಯಾಸ್** ಎಂಬ **ಮೇವಿನ** ಹುಲ್ಲನ್ನು ಬೆಳೆದರೆ **ಅಡಿಕೆ** ಇಳುವರಿ **ಚೆನ್ನಾಗಿ** ಬರುವುದು **ಕಂಡುಬಂದಿದೆ** ಇದರ **ಬೀಜ** ಮೂಡಿಗೆರೆಯ ಕೃಷಿ ವಿ.ವಿ. ಸಂಶೋಧನಾ **ಕೇಂದ್ರ**ದಲ್ಲಿ ದೊರೆಯುತ್ತದೆ.

ರಸಗೊಬ್ಬರದ ಶಿಫಾರ್ಸು ಪ್ರಮಾಣ:

ಪ್ರತಿಗಿಡಕ್ಕೆ 100 ಗ್ರಾಂ ಸಾರಜನಕ (N) 40 ಗ್ರಾಂ **ರಂಜಕ** (P) ಮತ್ತು 140 ಗ್ರಾಂ. **ಪೊಟ್ಯಾಶ್** (K) ಸಿಗುವಂತೆ ರಸಗೊಬ್ಬರಗಳನ್ನು ಸಂಯೋಜಿಸಿಕೊಂಡು ಇದರಲ್ಲಿ ಒಂದು **ಭಾಗ**ವನ್ನು ಮುಂಗಾರಿಗೆ ಮೊದಲೂ, ಒಂದು **ಭಾಗ**ವನ್ನು ನಂತರವೂ ಕೊಡಬೇಕು. **ಸಾರಜನಕ**ಕ್ಕೆ 'ಯೂರಿಯಾ'ವನ್ನೇ ಕೊಡುವುದು **ಸೂಕ್ತ**. ಪೊಟ್ಯಾಶ್‌ಗೆ 'ಮ್ಯುರೇಟ್ ಆಫ್ **ಪೊಟ್ಯಾಶ್**'ನ್ನೇ ಕೊಡಬೇಕು. ಇದರಲ್ಲಿ ಸಸ್ಯಗಳಿಗೆ ಅಲ್ಪ ಪ್ರಮಾಣದಲ್ಲಿ ಅಗತ್ಯವಿರುವ ಕ್ಲೋರೀನ್ ಪೋಷಕಾಂಶವಿದೆ. ಪ್ರತಿ ಮರಕ್ಕೆ 12 ಕಿಲೋದಷ್ಟು ಕಳಿತ ಕಾಂಪೋಸ್ಟ್ ಗೊಬ್ಬರ (ಅಥವ ಅದಕ್ಕೆ ಸಮನಾದಷ್ಟು ಹಟ್ಟಿಗೊಬ್ಬರ) ಕೊಡಬೇಕು.

ತೋಟವನ್ನು ಕಳೆರಹಿತವಾಗಿ, ಸ್ವಚ್ಛವಾಗಿಟ್ಟಿರಬೇಕು. 3 ವರ್ಷಕ್ಕೊಮ್ಮೆ ಉದಿ–ಕಪ್ಪುಗಳನ್ನು ಕಪ್ಪು–ಉದಿಗಳನ್ನಾಗಿ ಪರಿವರ್ತಿಸಬೇಕು. ಕಪ್ಪು–ಉದಿಗಳು ಸಮಪಾತಳಿ ಒಡ್ಡುಗಳ ಕ್ರಮದಲ್ಲಿರಬೇಕು. (ತೇವಾಂಶ ಉಳಿಯಲು ಅನುಕೂಲವಾಗುವಂತೆ ಕಪ್ಪುಗಳು ಇಳಿಜಾರಿಗೆ ಅಡ್ಡವಾಗಿ ಇರಬೇಕು.)

ಅಗತೆ ಮಾಡುವಾಗ ಮರದ ಬುಡ ಬಿಟ್ಟು ಮಾಡಬೇಕು. ಚೌಳು ಬೇರುಗಳನ್ನು ಕತ್ತರಿಸಬಾರದು. ಕತ್ತರಿಸಿದರೆ ಕ್ರಮೇಣ ಗೆಡ್ಡೆ ಮೇಲೆ ಮೇಲೆ ಬರುವುದರಿಂದ ಮರದ ಬುಡ ಅಭದ್ರವಾಗುತ್ತದೆ.

ಕೊಳೆರೋಗದ ಔಷಧಿ:

ಅಡಿಕೆ ಕೊಳೆ ರೋಗದ **ಔಷಧಿಯ** (ಬೋರ್ಡೋ ಮಿಶ್ರಣ) ವಿಚಾರದಲ್ಲಿ ಸಾಮಾನ್ಯವಾಗಿ ರೈತರು 2 **ತಪ್ಪುಗಳನ್ನು** ಮಾಡುತ್ತಾರೆ –(1) ಮಿಶ್ರಣದ **ಪ್ರಮಾಣ** ಮತ್ತು (2) ಸಿಂಪರಣೆಯ **ಕಾಲ**.

ಶೇಕಡಾ 1ರ ಬೋರ್ಡೋ **ಮಿಶ್ರಣ**ವೆಂದರೆ 1 ಕಿಲೋ ಮೈಲುತುತ್ತ, **1 ಕಿಲೋ** ಸುಣ್ಣ ಮತ್ತು 100 ಲೀಟರ್ **ನೀರು**—ಈ ಪ್ರಮಾಣದಲ್ಲಿರಬೇಕು. **ಔಷಧ**ವನ್ನು ಮೇ ತಿಂಗಳಲ್ಲೇ ಸಿಂಪಡಿಸಬೇಕು. ಮಳೆ ಬಂದು ಕೊಳೆ ಶುರುವಾದ ಮೇಲಲ್ಲ. "ರೋಗ ಬಂದ ಮೇಲೆ ಹತೋಟಿಗಿಂತ ಅದು ಬರದಂತೆ ತಡೆಗಟ್ಟುವುದೇ ಯೋಗ್ಯ." ಬಿಸಿಲಿದ್ದಾಗ ಸಿಂಪರಣೆ ಮಾಡಿದರೆ ಹರಳು ಉದುರುವ ಅಥವಾ ಸುಟ್ಟು ಹೋಗುವ ಭಯ ಸರಿಯಲ್ಲ. ಸುಣ್ಣ ಹೆಚ್ಚಾದರೆ ಹರಳು ಉದುರುತ್ತದೆ, ಮೈಲುತುತ್ತ ಹೆಚ್ಚಾದರೆ ಒಣಗುತ್ತದೆ ಅಷ್ಟೇ. ಮಸೆದ ಕತ್ತಿಯನ್ನು ಬೋರ್ಡೋ ಮಿಶ್ರಣದಲ್ಲಿ ಅದ್ದಿ ನೋಡಿದಾಗ ಕಂದು

(4ನೇ ಪುಟಕ್ಕೆ)

'ಮಂಡಳಿ' ಸ್ಥಾಪನೆಗೆ ಅಡಿಕೆ ಬೆಳೆಗಾರರ ಮನವಿ

ಇತ್ತೀಚೆಗೆ ಶಿವಮೊಗ್ಗ, ತೀರ್ಥಹಳ್ಳಿ, ಕೊಪ್ಪ ತಾಲ್ಲೂಕುಗಳ ಅಡಿಕೆ ಬೆಳೆಗಾರರ ನಿಯೋಗವೊಂದು ಅಡಿಕೆ ಬೆಳೆಗಾರರ ಹಿತಾಸಕ್ತಿಯನ್ನು ನಿರಂತರವಾಗಿ ಕಾಪಾಡಲು ಅನುಕೂಲವಾಗುವಂತೆ ಕಾಫಿ ಮಂಡಳಿ ಮಾದರಿಯಲ್ಲಿ ಮಂಡಳಿಯೊಂದನ್ನು ಸ್ಥಾಪಿಸುವಂತೆ ಸರ್ಕಾರವನ್ನು ಆಗ್ರಹ ಪಡಿಸಿದೆ.

ಈ ಬಗ್ಗೆ ಮನವಿ ಪತ್ರವನ್ನು ಕರ್ನಾಟಕ ತೋಟಗಾರಿಕಾ ಸಚಿವರಾದ ಬಿ. ಸೋಮಶೇಖರ್ ಅವರಿಗೆ ಅರ್ಪಿಸಲಾಯಿತು.

ಇತ್ತೀಚಿನ ವರ್ಷಗಳಲ್ಲಿ ಅಡಿಕೆ ಬೆಳೆಗಾರರಿಗೆ ವ್ಯವಸಾಯದ ಖರ್ಚು ವೆಚ್ಚಗಳು ಇಮ್ಮಡಿಗೊಳ್ಳುತ್ತಿವೆ. ಕೃಷಿ ಕಾರ್ಮಿಕರ ಸಂಬಳವೂ ಗಮನಾರ್ಹವಾಗಿ ಹೆಚ್ಚಾಗಿದ್ದು, ಬೆಳೆದ ಅಡಿಕೆಗೆ ನಿಗದಿತ ಧಾರಣೆ ಸಿಗದೆ ದರಗಳು ಡೋಲಾಯಮಾನ ಸ್ಥಿತಿಯಲ್ಲಿದ್ದು, ವರ್ಷವಿಡೀ ಪಟ್ಟ ಶ್ರಮದ ಸಾರ್ಥಕತೆಯ ಬಗ್ಗೆ ಏನೂ ಹೇಳುವಂತಿಲ್ಲವಾಗಿದೆ.

ಒಂದು ಕಡೆಯಿಂದ ವ್ಯಾಪಾರಿಗಳಿಂದಲೂ ಬೆಳೆಗಾರರು ಶೋಷಣೆಗೆ ಒಳಗಾಗುತ್ತಿರುವುದೂ ಇದೆ. ಕೆಲವು ವ್ಯಾಪಾರಿಗಳಿಂದ ತೂಕ, ಅಳತೆ ಮತ್ತು ಡ್ರೈಯೇಜ್ ಹೆಸರಿನಲ್ಲಿ ನಡೆಯುತ್ತಿರುವ ವಂಚನೆಗೆ ಅನೇಕ ಬೆಳೆಗಾರರು ಒಂದಲ್ಲ ಒಂದು ರೀತಿಯಲ್ಲಿ ಗುರಿಯಾದವರೇ ಆಗಿರುತ್ತಾರೆ. ರೈತರಿಗೆ ಮಳೆಗಾಲದಲ್ಲಿ ನೀಡಿದ ಮುಂಗಡ ಹಣಕ್ಕೆ ಹುಚ್ಚಾಪಟ್ಟೆ ಬಡ್ಡಿ ಮತ್ತು ಸೇವಾ ಶುಲ್ಕವನ್ನು ಹಾಕಲಾಗುತ್ತಿದ್ದು ವರ್ಷದ ಕೊನೆಯಲ್ಲಿ ಮಾತ್ರವೇ ಬಡ್ಡಿಯ ಬಿಸಿ ತಗಲಿರುವುದು ರೈತನಿಗೆ ಗೊತ್ತಾಗುತ್ತದೆ. ವರ್ಷಕ್ಕೆ ಒಮ್ಮೆ ಬರುವಂಥ ಅಡಿಕೆ ಫಸಲು ರೇಖೆ ಆದ ನಂತರವೇ ತಮ್ಮ ಅನಿಶ್ಚಿತ ಆದಾಯವನ್ನು ಎದುರು ನೋಡುವ ಅಡಿಕೆ ಬೆಳೆಗಾರರು ಬಡ್ಡಿಯನ್ನು ಯೋಚಿಸದೇ ಮುಂಗಡವನ್ನು ತೋಟದ, ಮನೆಯ ಖರ್ಚಿಗಾಗಿ ಪಡೆಯದೇ ಬೇರೆ ವಿಧಿಯಿಲ್ಲ.

ಆದುದರಿಂದ ಏಲಕ್ಕಿ, ಕಾಫಿ, ರೇಷ್ಮೆಗಳಂತೆ ಅಡಿಕೆಗೂ ಒಂದು ಕೇಂದ್ರ ಮಂಡಳಿಯನ್ನು ಸ್ಥಾಪಿಸಿ, ಬೆಳೆಯ ಪೂರ್ಣ ಲಾಭ ಅಡಿಕೆ ಬೆಳೆಗಾರರಿಗೆ ದೊರಕುವಂತಾಗಬೇಕೆಂದು ಸಚಿವರಿಗೆ ಅರ್ಪಿಸಿದ ಮನವಿಯಲ್ಲಿ ಒತ್ತಾಯಿಸಲಾಗಿದೆ.

(—'ತೀರ್ಥಹಳ್ಳಿ, ಗ್ರಾಮಭಾರತಿ')

ಶಂಕರ್ ಸಾರಿಗೆ ಸಂಸ್ಥೆಯಲ್ಲಿ ಮಿಂಚಿನ ಮುಷ್ಕರ

(ಒಂದನೇಯ ಪುಟದಿಂದ)

ಮುಖಾಮುಖಿ

ಅನಂತರ ಡಿವೈಎಸ್ಪಿಯವರ ಸಮ್ಮುಖ ಸಂಘ–ಎಂ.ಡಿ. ಮುಖಾಮುಖಿ ಸಭೆ ನಡೆಯಿತು. (ಸಂಧಾನ ಸಭೆ ಎನ್ನಲಾಗದ್ದು.) ಸ್ವಲ್ಪ ಚರ್ಚೆಯ ನಂತರ ಜೋಸೆಫ್ ಮತ್ತು ಗೋಪಾಲ್ ಪ್ರಕರಣಗಳ 'ಪರಿಶೀಲನೆ'ಯ ಭರವಸೆ ಬಂದರೂ "ಸಂಜೀವನ ವರ್ಗಾವಣೆ ಆಜ್ಞೆ ಯನ್ನು ನಾನು ಹಿಂತೆಗೆದುಕೊಳ್ಳುವುದಿಲ್ಲ. ನಮ್ಮ ಹಕ್ಕು ನಾವು ಚಲಾಯಿಸಿದ್ದೇವೆ. ಮುಷ್ಕರ ನಿಮ್ಮ ಹಕ್ಕು. 3 ತಿಂಗಳು ಬೇಕಾದರೂ ಮುಷ್ಕರ ಮಾಡಿ. ಆ ಬಗ್ಗೆ ನಾನೇನೂ ಹೇಳುವುದಿಲ್ಲ" ಎಂದು ರಮೇಶರಾವ್ 'ಸಂಧಾನ' ಮುಕ್ತಾಯ ಮಾಡಿದರು.

"ಕಾರ್ಮಿಕ ಸಂಘವನ್ನು ಮುರಿಯುವುದು [illegible] ಮುಷ್ಕರ ಮಾಡುವುದು [illegible] ತಿಂಗಳು ಮು[illegible] ಎಂಬುದನ್ನೇ [illegible] ಈ ರೀತಿ [illegible]

[illegible] "[illegible] ಹೇಗೆ [illegible] ಹೇಳಿ [illegible] ನಮ್ಮ ಹಕ್ಕು. Prerogative" ಎಂಬುದನ್ನೇ [illegible] ಹೇಳಿದರು.

ಇವರ ಸಹಜ ಫಲಿತಾಂಶವೆಂಬಂತೆ [illegible] ಮುಷ್ಕರ [illegible] ಸಂಪ ತೀರ್ಮಾನ ಕೈಗೊಂಡರು.

ಸಂಬಂಧ–ಲಾಭ–ನಷ್ಟ

[illegible] ಸಂಬಂಧ [illegible] ಕಿಲೋಮೀಟರ್ [illegible] 4 [illegible] ಲಾಭ [illegible] ಈ [illegible] ರೂ. [illegible] 83 [illegible] 2[illegible]

ನಷ್ಟ ಅನುಭವಿಸಿತ್ತಂತೆ! ಒಂದು ವೇಳೆ 'ಮಿಸ್–ಮ್ಯಾನೇಜ್ ಮೆಂಟ್' ನಿಂದ ಹೀಗಾಗಿರಬಹುದು ಎಂದೇ ಒಪ್ಪಿಕೊಂಡರೂ ಕಳೆದೆರಡು ವರ್ಷ ಲಾಭ ಬಂದಿರುವುದನ್ನು ರಾಯಕರೇ ಘೋಷಿಸಿದ್ದಾರಂತೆ.

ಕಂಪನಿಯ ತಜ್ಞ ವರ್ಕ್ಸ್ ಮ್ಯಾನೇಜರ್ ಕಾರ್ಮಿಕರೊಂದಿಗೆ ಇಟ್ಟುಕೊಂಡಿರುವ ಒಳ್ಳೆಯ ಸಂಬಂಧ ಇದಕ್ಕೆ ಕಾರಣವೆನ್ನಲಾಗುತ್ತದೆ. ತನ್ನೊಂದಿಗೆ ಕಾರ್ಮಿಕರು ಚೆನ್ನಾಗಿಯೇ ಸಹಕರಿಸುತ್ತಾರೆ ಎಂದು ಅವರು ಹೇಳುತ್ತಾರೆ.

ಅಂದರೆ–

ಕಾರ್ಮಿಕರಿಗೂ ಕೆಲಸಕ್ಕೂ ನಡುವೆ ವಿರಸ ಇಲ್ಲ. ವಿರಸ ಬಂದಿರುವುದು ಕಾರ್ಮಿಕರಿಗೂ ನಾಟಕೀಕ ವರ್ಗದ ನು

ನೋಭಾವಕ್ಕೂ ನಡುವೆ ಎಂಬುದು ಇದರಿಂದ ವೇದ್ಯವಾಗುತ್ತಿಲ್ಲವೆ?

ಕಾರ್ಮಿಕರೇನೂ ಯೂನಿಯನ್ ಆದೊಡನೆಯೇ ಮುಷ್ಕರಕ್ಕೆ, ಯಂತ್ರೋಪಕರಣಗಳನ್ನು ಮುರಿದು–ಒಡೆದು ಮಾಡುವ ವಿನಾಶಕ್ಕೆ ಇಳಿದಿಲ್ಲ. ಕೊನೆಯಿಲ್ಲದ ಕಾನೂನಿನ ಜಂಜಾಟದಲ್ಲೇ ಈಜಿ ಜಯಿಸಲು ಹೆಣಗುತ್ತಿದ್ದಾರೆಂಬುದು ಅವರ ಫೈಲುಗಳನ್ನು ನೋಡಿದವರಿಗೆ ಅರ್ಥವಾಗುತ್ತದೆ.

ಅದರೂ ಯೂನಿಯನ್ ಬೇಡ ಯಾಕೆ?

ಹಾಗಾದರೆ, ಸಾವಿರಾರು ಮಂದಿ ಪ್ರಯಾಣಿಕರಿಗೆ ಇನ್ನಿಲ್ಲದ ತೊಂದರೆ ನೀಡುವ ಈ ಮುಷ್ಕರಕ್ಕೆ ಮೂಲ ಹೊಣೆ ಯಾರು? ಜನರೇ ನಿರ್ಧರಿಸಬೇಕು.

ಲೂll ಇಲಾಖೆ ಗ್ಯಾಂಗ್‌ಮೆನ್ ಪ್ರದರ್ಶನ, ಧರಣಿ

ಕೊಪ್ಪ: ಲೋಕೋಪಯೋಗಿ ಇಲಾಖೆಯ ಗ್ಯಾಂಗ್‌ಮೆನ್‌ಗಳು ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ಜೂನ್ 23 ರಂದು ಇಲ್ಲಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ, ಇಲಾಖೆ ಕಚೇರಿಯ ಮುಂದೆ ಧರಣಿ ನಡೆಸಿದರು. ಅನಂತರ ನಡೆದ ಸಂಧಾನದಲ್ಲಿ ಅವರ ಪ್ರಮುಖ ಸ್ಥಳೀಯ ಬೇಡಿಕೆಗಳ ಈಡೇರಿಕೆಯ ಭರವಸೆ ದೊರೆಯಿತು.

ಎ.ಐ.ಟಿ.ಯು.ಸಿ. ಆಶ್ರಯದ ಅವರ ಸಂಘದ ಪ್ರಧಾನ ಕಾರ್ಯದರ್ಶಿ ಎಲ್. ಆರ್. ರಾಮಚಂದ್ರ ಚಳುವಳಿಯ ನೇತೃತ್ವ ವಹಿಸಿದ್ದರು.

ಅಡಿಕೆ ಬೆಳೆ ಆರೈಕೆಯ ಬಗ್ಗೆ ಕೆಲವು ತಜ್ಞ ವಿಚಾರಗಳು

(3ನೇ ಪುಟದಿಂದ)

ಬಣ್ಣಕ್ಕೆ ತಿರುಗಿ [illegible] ಮಿಶ್ರಣದ [illegible] ಮತ್ತು ಕತ್ತಿಯ [illegible] 40-45 ದಿನಗಳಿಗೆ 2ನೇ ಸಿಂಪರಣೆ [illegible] 40 ದಿನಗಳಿಗೆ 2ನೇ ಸಿಂಪರಣೆ ಅತ್ಯವಿಲ್ಲ. ಬೋರ್ಡೋ ಮಿಶ್ರಣ ತಯಾರಿಸುವ ಇದ [illegible] 100 ಲೀಟರ್ [illegible] ಕಿಲೋ ಬೆಲ್ಲ [illegible] 24 ಗಂಟೆಯ [illegible]

ಮಿಶ್ರಣ ತಯಾರಿ:

[illegible] ಲೀ. ನೀರಿನಲ್ಲಿ [illegible] 10 ಲೀ. ನೀರಿನಲ್ಲಿ [illegible] ದ್ರಾವಣ [illegible] ಕೊಳ್ಳಬೇಕು. ಸುಣ್ಣದ ದ್ರಾವಣವನ್ನು [illegible] ಅದಕ್ಕೆ ಮೈಲುತುತ್ತ ದ್ರಾವಣವನ್ನು ಸೇರಿಸಬೇಕು. ನಂತರ 80 ಲೀ. ನೀರು ಸೇರಿಸಬೇಕು. ಯಾವಾಗಲೂ ಸುಣ್ಣದ ನೀರಿಗೆ ಮೈಲುತುತ್ತದ ನೀರನ್ನು ಸುರಿಯ ಬೇಕೇ ವಿನಃ ಮೈಲುತುತ್ತದ ನೀರಿಗೆ ಸುಣ್ಣದ ನೀರನ್ನು ಸುರಿಯಬಾರದು.

ರೋಗಗಳು ಮತ್ತು ಕೀಟಗಳು:

(1) ಹಳದಿ ಎಲೆ ರೋಗ (ತೊಂಡೆ ರೋಗ): ಚಿಹ್ನೆಗಳು–ತೊಂಡೆಯಿಂದ ಮೇ[illegible] ಹಳದಿ ಬಣ್ಣಕ್ಕೆ ತಿರುಗುವುದು, ಹೆಡೆ ಗಿಡ್ಡವಾಗುವುದು, ಕಾಯಿ ಕಪ್ಪಾಗುವುದು ಅಂದರೆ ಕೆಟ್ಟ ರುಚಿ, ತೊಂಡೆ [illegible] ಬಣ್ಣ, [illegible]

"[illegible]" ಎಂಬ ಬ್ಯಾಕ್ಟೀ[illegible]

[illegible] ರಿಯಾ [illegible] ಹರಡುವ [illegible] ಯಾವುದೆಂದು [illegible] ಮತ್ತು [illegible] ಸಂಶೋಧನೆ [illegible]

(2) ಅಡಿಕೆ ಕಾಯಿ ಒಡೆಯುವುದು. (ಅಂಡೂಡಕು) ಕಾರಣ [illegible] [illegible] ಹೋಗುವಂತೆ ಮಾಡಬಹುದು. ಅಥವಾ [illegible]

(3) [illegible] ಇದಕ್ಕೆ 3 ಕಾರಣಗಳವೆ–1) [illegible], 2) [illegible] ರಂಜಕ ಮತ್ತು [illegible] ಕೊರತೆ.

ಮೊದಲನೆಯ ಸಮಸ್ಯೆ ತಪ್ಪಿಸಲು ಬೀಜದ ಆಯ್ಕೆಯಲ್ಲಿ ಎಚ್ಚರಿಕೆ ವಹಿಸಬೇಕು. ಮೂರನೆಯದಕ್ಕೆ, ಪೊಟ್ಯಾಶ್, ರಂಜಕ ಮತ್ತು ಮಲ್ಟಿಪ್ಲೆಕ್ಸ್ ಸಂಘ [illegible] ಪೋಷಕಾಂಶ ಪೂರೈಸುವ ರಸಗೊಬ್ಬರ ನೀಡಬೇಕು. ಮುಂಗಾರಿಗೆ ಮೊದಲು 1 ಮರಕ್ಕೆ [illegible] ಕಿಲೋದಷ್ಟು [illegible] ಅಥವಾ [illegible]

[illegible] ಹಳ, ಇದು [illegible] ತೊಂಡೆ [illegible] ಗಿಡ್ಡವಾಗುವುದು [illegible] ಮತ್ತು [illegible] ಸ್ವಲ್ಪ ದೂಡ [illegible] ಹೋಗುತ್ತದೆ.

ಮೂರನೆಯದಕ್ಕೆ 8 ಗ್ರಾಂ [illegible] ಹರಳುಗಳನ್ನು [illegible] ಈ ಹುಳದ ಬಾಧೆಯಿಂದ [illegible] ಮುಂಗಾರಿಗೆ [illegible] ಮತ್ತು ನಂತರ [illegible] ಅನುಸರಿಸಿ [illegible] ಪ್ರತಿ ಮರಕ್ಕೆ 100 ಗ್ರಾಂ ಯೂರಿಯಾ, 180 ಗ್ರಾಂ

ಸೂಪರ್ ಮತ್ತು 200 ಗ್ರಾಂ ಪೊಟ್ಯಾಶ್ ಗಳನ್ನು 'ಬ್ಲೆಂಡಿಂಗ್ ಡೋಸ್' ಆಗಿ ಕೊಡಬೇಕು.

* * *

ಬೆಳೆಗಾರರು [illegible] ರೈತರು ತಂಡಗಳಾಗಿ ಆಗಾಗ [illegible] ಸಂಶೋಧನಾ ಕೇಂದ್ರಕ್ಕೆ ಭೇಟಿ ಕೊಟ್ಟು ಮಾಹಿತಿ ತಿಳಿದುಕೊಳ್ಳುವುದರಿಂದ ಅವರ ತಿಳುವಳಿಕೆ ವೃದ್ಧಿಯಾಗುವುದರ ಜೊತೆಗೆ ಸಂಶೋಧಕ ಸಿಬ್ಬಂದಿಗಳಿಗೂ [illegible] ಉತ್ತೇಜನ ದೊರೆಯುವುದಲ್ಲದೆ ಇನ್ನೊಂಡೆಯಿಂದ ಅವರ ಜವಾಬ್ದಾರಿಯ ಪ್ರಜ್ಞೆಯೂ ಸದಾ ಜಾಗೃತವಾಗಿರಲು ನೆರವಾಗುತ್ತದೆ ಎಂದು ಈ ಹಿರಿಯ ಸಂಶೋಧಕರು ರೈತರಿಗೆ ಒಂದು ಮಹತ್ವದ ಸಲಹೆ ನೀಡಿದರು.

ಏಲಕ್ಕಿ ಧಾರಣೆ

ಸಕಲೇಶಪುರ

ತಾರೀಕು	ಗರಿಷ್ಠ	ಸರಾಸರಿ
10.6.86	178	109
11.6.86	169	96
12.6.86	195	84
13.6.86	213	98
	ಸಿರ್ಸಿ	
11.6.86	121	88

ವ್ಯಾಪ್ ಕೋಸ್, ಶಿವಮೊಗ್ಗ

21.6.86 40ರಿಂದ 145 ರೂ.

ಅಡಿಕೆ ಧಾರಣೆ

ಶಿವಮೊಗ್ಗ ತಾ॥ 27.6.1986

ಸರಕು	2860 – 3086
ಚಟ್ಟಿ	1680 – 1923
ಗೊರಬಲು	850 – 1200

ಸಾಗರ ತಾ॥ 27.6.86

ಚಾಲಿ ರೂ.	1636 – 1851
ಕೆಪ್ಪೆ ಗೋಟು ರೂ.	516 – 785
ಆಪಿ ರೂ.	3562 – 3852

ಚಿಲ್ಲರೆ ನಾಣ್ಯಗಳ 'ಡಿಪೋ'

ಕೊಪ್ಪ: ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಜಿಲ್ಲಾ ತಾ॥ ಗಳಲ್ಲೂ 'ಚಿಲ್ಲರೆ ನಾಣ್ಯಗಳ ಡಿಪೋ'ಗಳನ್ನು ರಚಿಸಿದ್ದು, ಅಲ್ಲಿ 25 ಮತ್ತು 50 ಪೈಸೆಯ ನಾಣ್ಯಗಳನ್ನು [illegible] ರಿಸಲು ವ್ಯವಸ್ಥೆ ಮಾಡಿದೆ. ಅದರಂತೆ ಕೊಪ್ಪ ಶಾಖೆಯಲ್ಲಿ ಪ್ರತಿ ಗುರುವಾರ [illegible] [illegible] ನಾಣ್ಯಗಳನ್ನು ವಿತರಿಸಲು ವ್ಯವಸ್ಥೆ ಮಾಡಲಾಗಿದೆ [illegible] ಬ್ಯಾಂಕಿನ ವ್ಯವಸ್ಥಾಪಕರು ತಿಳಿಸಿದ್ದಾರೆ.

ಜಿಲ್ಲಾ ಮಾಜಿ ಸೈನಿಕರ ಸಭೆ

ನರಸಿಂಹರಾಜಪುರ: [illegible] ಜಿಲ್ಲಾ ಮಾಜಿ ಸೈನಿಕರ ಸಂಘದ ಸಭೆ [illegible] ನವರ ಅಧ್ಯಕ್ಷತೆಯಲ್ಲಿ ಜೂನ್ 22 ರಂದು ನಡೆಯಿತು. ಕೊಪ್ಪ, ಶೃಂಗೇರಿ, ನ. ರಾ. ಪುರ ತಾ॥ ಮಾಜಿ ಸೈನಿಕರು ಇದರಲ್ಲಿ ಪಾಲ್ಗೊಂಡಿದ್ದರು.

ನ. ರಾ. ಪುರ ತಾಲ್ಲೂಕಿಗೆ [illegible] ಬಿ. ಎಂ. [illegible] ತಾಲ್ಲೂಕಿಗೆ ಚಾರ್ಜ್ [illegible] (ಉಪಾ[illegible]

ಮತ್ತು), ನರಸಿಂಹ ಸುಂದರ್ ಜೋಶಿ (ಸಹ ಕಾರ್ಯದರ್ಶಿ) ಮತ್ತು ಜಾನ್ ಪೆರಿಸ್ (ಖಜಾಂಚಿ) ಇವರುಗಳನ್ನು ಆಯ್ಕೆ ಮಾಡಲಾಯಿತು.

ಜುಲೈ 13ರ ಬೆಳಿಗ್ಗೆ 11 ಗಂಟೆಗೆ ಚಿಕ್ಕಮಗಳೂರು ಪುರಭವನದಲ್ಲಿ ಸಂಘದ ಸಭೆ ಕರೆಯಲಾಗಿದೆ. [illegible] ಮಾಜಿ ಸೈನಿಕರು [illegible] ಸಮಸ್ಯೆಗಳನ್ನು ಸಂಘಕ್ಕೆ ತಿಳಿಸಲು ಸಭೆಗೆ ಹಾಜರಾಗಲು ಕೋರಲಾಗಿದೆ.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ ಹಿಮಮನೆ ನಾಗರಾಜ್, [illegible] ಕೊಪ್ಪ.